# ದೀಪಿಕಾ ಕುತ್ತಿಗೆಯಲ್ಲಿ...





‘ಏಯ್ ನನ್ನ ಕುತ್ತಿಗೆಯನ್ನು ಏನ್ ನೋಡ್ತಿ? ಬಾಟಲಿಯ ಕುತ್ತಿಗೆಯನ್ನು ನೋಡು...’ ಹೀಗಂತ ದೀಪಿಕಾ ಪಡುಕೋಣೆ ತಂಪು ಪಾನೀಯದ ಬಾಟಲಿ ಹಿಡಿದು ಕೇಳುವ ಜಾಹೀರಾತು ನೋಡಿದ್ದೀರಲ್ಲಾ? ಬಾಟಲಿಯ ಕುತ್ತಿಗೆ-ಯನ್ನಲ್ಲ, ದೀಪಿಕಾ ಕತ್ತನ್ನೇ ಒಮ್ಮೆ ನೋಡಿ... ಕೆಲ ತಿಂಗಳ ಹಿಂದೆ ದೀಪಿಕಾ ಕುತ್ತಿಗೆ ನೋಡಿದ್ದರೆ ಇದ್ಯಾಕೆ ಎಂದು ಅರ್ಥವಾಗಬಹುದು. ಡಿಪ್ಸ್‌ರ ಜಾಹೀರಾತು ನೋಡಿದವರು ಆಕೆಯ ಹಳೆಯ ಫೋಟೊಗಳನ್ನು ಕೆದುಕುತ್ತಿದ್ದಾರೆ. ಇಂಟರ್‌ನೆಟ್‌ನಲ್ಲಿ ಹೀಗೆ ಕತ್ತು ತೋರಿಸಿದ್ದ ದೀಪಿಕಾರ ಹಳೆಯ ಫೋಟೊ ನೋಡಿ ಬಿದ್ದು ಬಿದ್ದು ನಗುತ್ತಿದ್ದಾರೆ. ಒಂದು ಕಾಲದಲ್ಲಿ ದೀಪಿಕಾ ಮತ್ತು ರಣಬೀರ್ ಕಪೂರ್ ಅಮರ ಪ್ರೇಮಿಗಳಂತೆ ಬಿ-ಟೌನಿನ ಗಲ್ಲಿಗಳಲ್ಲಿ ಓಡಾಡಿದ್ದು ಗುಟ್ಟೇನಲ್ಲ. ಅದರಲ್ಲಿಯೂ ದೀಪಿಕಾರ ಪ್ರೇಮದ ಪರಿ ಕಂಡು ಬೆರಗಾಗದವರಿಲ್ಲ. ಆ ಪ್ರೇಮದ ಕುರುಹನ್ನು ದೀಪಿಕಾ ಹಿಂಜರಿಕೆ-ಯಿಲ್ಲದೆ ಬಹಿರಂಗವಾಗಿಯೇ ಪ್ರದರ್ಶಿಸಿದ್ದರು. ಅದೂ ಈಗ ಖಾಲಿ ತೋರುವ ಕುತ್ತಿಗೆಯ ಮೇಲೆಯೇ. ರಣಬೀರ್ ಜೊತೆ ಪ್ರೇಮ ಸಲ್ಲಾಪ ನಡೆಸುತ್ತಿದ್ದಾಗ ಪ್ರೀತಿಯ ದ್ಯೋತಕವಾಗಿ ‘ಆರ್‌ಕೆ’ ಎಂದು ಟ್ಯಾಟೂ ಹಾಕಿಸಿಕೊಂಡಿದ್ದರು ಡಿಪ್ಸ್. ಆದರೆ ರಣಬೀರ್ ನಂತರ ಕತ್ರೀನಾ ತೆಕ್ಕೆಗೆ ಜಾರಿದರು. ಭಗ್ನಪ್ರೇಮಿ ದೀಪಿಕಾ ಕ್ರಮೇಣ ಸುಧಾರಿಸಿಕೊಂಡು ರಣವೀರ್ ಸಿಂಗ್‌ರ ಪ್ರೇಮಪಾಶದಲ್ಲಿ ಸಿಲುಕಿದರು. ಈಗ ಟ್ಯಾಟೂ ಎಲ್ಲಿ ಮಾಯವಾಗಿದೆ ಎಂಬ ಪ್ರಶ್ನೆ ಹುಟ್ಟಿಕೊಂಡಿದೆ.

ಅಷ್ಟು ಸುಲಭಕ್ಕೆ ಟ್ಯಾಟೂ ಗುರುತನ್ನು ಅಳಿಸಲು ಸಾಧ್ಯವಿಲ್ಲ. ರಣಬೀರ್ ಇನ್ನು ದಕ್ಕುವುದಿಲ್ಲ ಎಂದು ದೀಪಿಕಾ ಲೇಸರ್ ಚಿಕಿತ್ಸೆ ಮೂಲಕ ಟ್ಯಾಟೂಅನ್ನು ತೆಗೆದು ಹಾಕಿದ್ದಾರೆಯೇ ಅಥವಾ ಜಾಹೀರಾತಿಗಾಗಿ ಫೋಟೊಶಾಪ್ ತಂತ್ರಜ್ಞಾನದ ಮೂಲಕ ಅಳಿಸಿರಬಹುದೇ ಅಥವಾ ಮೇಕಪ್ ಅದನ್ನು ಮುಚ್ಚಿಹಾಕಿದೆಯೇ? ಹೀಗೆ ಹಲವು ಪ್ರಶ್ನೆಗಳ ಸುತ್ತ ಬಿಟೌನಿನಲ್ಲಿ ಕಾವೇರಿದ ಚರ್ಚೆ ನಡೆಯುತ್ತಿದೆ. ಟ್ಯಾಟೂ ಮಾಯವಾಗಲು ರಣವೀರ್ ಸಿಂಗ್ ಕಾರಣ ಎಂದೂ ಕೆಲವರು ಹೇಳುತ್ತಿದ್ದಾರೆ. ಉತ್ತರ ಡಿಪ್ಸ್ ಬಾಯಿಂದಲೇ ಬರಬೇಕು.

## ಮುದುಡಿತೆ ಅನುರಾಗ?

ನಿರ್ದೇಶಕ ಅನುರಾಗ್ ಕಶ್ಯಪ್ ಮೊನ್ನೆ ಮೊನ್ನೆ ತಾನೆ ಪತ್ನಿ ಕಲ್ಕಿ ಕೋಚಿನ್‌ರಿಂದ ದೂರವಾಗಿದ್ದಾರೆ. ಇಬ್ಬರೂ ದೂರವಾಗುವುದಕ್ಕೆ ನಟಿ ಹುಮಾ ಖುರೇಷಿ ಕಾರಣ ಎನ್ನಲಾಗುತ್ತಿದ್ದರೂ ಇದುವರೆಗೂ ಖುರೇಷಿ, ಅನುರಾಗ್ ಜೊತೆ ಕಾಣಿಸಿಕೊಂಡಿಲ್ಲ. ಈ ವಿರಹದ ನಡುವೆ ಅನುರಾಗ್‌ರ ಬದುಕಿನಲ್ಲಿ ಹೊಸ ಪ್ರೀತಿಯೊಂದು ಚಿಕ್ಕದಾಗಿ ಕಾಣಿಸಿಕೊಂಡು ಇದ್ದಕ್ಕಿದ್ದಂತೆ ಮರೆಯಾಗಿರುವ ಸುದ್ದಿ ಬಂದಿದೆ. ಕಲ್ಕಿಯಿಂದ ದೂರಾದ ಕೆಲ ದಿನಗಳಲ್ಲಿಯೇ ತಮ್ಮ ‘ಬಾಂಬೆ ವೆಲ್ವೆಟ್’ ಚಿತ್ರದ ಸಹಾಯಕ ನಿರ್ದೇಶಕಿ ಸಬ್ರಿನಾ ಖಾನ್ ಜೊತೆ ಅವರ ಅನುರಾಗ ಅರಳಿತ್ತು. ಚಿತ್ರದ ನೆಪದಲ್ಲಿ ಇಬ್ಬರೂ ಪ್ಯಾರಿಸ್‌ನ ಸುಂದರ ತಾಣಗಳಲ್ಲಿ ಸುತ್ತಾಡಿದ್ದಾರೆ. ಹೀಗಾಗಿ ವಿಚ್ಛೇದನ ನಂತರದ ದಿನಗಳು ಅನುರಾಗ್ ಅಂದುಕೊಂಡಷ್ಟು ಅವರಿಗೆ ಕೆಟ್ಟದೆನಿಸಿಲ್ಲ. ಅಲ್ಲದೆ ತಮ್ಮ ಕನಸಿನ ಪ್ರಾಜೆಕ್ಟ್ ‘ಬಾಂಬೆ ವೆಲ್ವೆಟ್’ನಲ್ಲಿ ಮುಳುಗಿದ್ದರಿಂದ ಕಲ್ಕಿಯನ್ನು ಹೆಚ್ಚೂ ಕಡಿಮೆ ಮರೆತೇ ಬಿಟ್ಟಿದ್ದರು. ಇಬ್ಬರ ನಡುವಿನ ಆತ್ಮೀಯತೆ ಸೆಟ್‌ನಲ್ಲಿದ್ದವರಿಗೂ ತಿಳಿದಿತ್ತು. ಆದರೆ ಪ್ಯಾರಿಸ್‌ನಿಂದ ಭಾರತಕ್ಕೆ ಮರಳುತ್ತಿದ್ದಂತೆಯೇ ಅವರಿಗೆ ಸಂಕಟಗಳು ಶುರುವಾಗಿದೆ.



ಅವರ ಹೊಸ ಪ್ರೀತಿ ಅರಳುವ ಮೊದಲೇ ಮುದುಡುವ ಲಕ್ಷಣಗಳು ಕಾಣಿಸುತ್ತಿವೆ. ಅನುರಾಗ್ ಜೊತೆ ಮಗಳ ಒಡನಾಟದ ಕುರಿತ ವರದಿಗಳನ್ನು ಓದಿರುವ ಸಬ್ರಿನಾರ ತಂದೆ ಇಬ್ಬರನ್ನೂ ದೂರಮಾಡಿದ್ದಾರೆ ಎನ್ನಲಾಗುತ್ತಿದೆ. ಹಲವು ದಿನಗಳಿಂದ ಆಕೆಯನ್ನು ಸಂಪರ್ಕಿಸಲು ಅನುರಾಗ್ ಪ್ರಯತ್ನಿಸುತ್ತಿದ್ದರೂ ಸಬ್ರಿನಾ ಕರೆ ಸ್ವೀಕರಿಸುತ್ತಿಲ್ಲ, ಅವರ ಕಣ್ಣಿಗೂ ಬೀಳುತ್ತಿಲ್ಲ. ಬಹುಶಃ ಆಕೆಯ ತಂದೆ ಆಕೆಯನ್ನು ಗುಟ್ಟಾಗಿ ಬೇರಾವುದೋ ಸ್ಥಳಕ್ಕೆ ಕಳುಹಿಸಿರಬಹುದು ಎಂದು ಅನುರಾಗ್‌ರ ಆಪ್ತರೊಬ್ಬರು ಹೇಳಿದ್ದಾರೆ. ಮಾಧ್ಯಮದ ಮುಂದೆ ತಮ್ಮಿಬ್ಬರ ಪ್ರಣಯ ಪ್ರಸಂಗವನ್ನು ಬಹಿರಂಗಪಡಿಸಿದವರ ಮೇಲೆ ಅನುರಾಗ್ ಬೇಸರಿಸಿಕೊಂಡಿದ್ದಾರೆ.

■ ಅಮಿ